ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 556/2025**

**ಫ್ರಾಸಾ- 2 ಚಾಸಾ- 2**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮುರುಳೀಧರ್ ಕೆ |
| ತಂದೆಯ ಹೆಸರುಃ | : | ಕೃಷ್ಣಪ್ಪ |
| ವಯಸ್ಸುಃ | : | 58 ವರ್ಷ |
| ಉದ್ಯೋಗಃ | : | ಪೊಲೀಸ್ ಉಪಾಧೀಕ್ಷಕರು, ರಾಜ್ಯ ಗುಪ್ತವಾರ್ತೆ ಬೆಂಗಳೂರು |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 29-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಆಗಸ್ಟ್2023 ರಿಂದ ಅಕ್ಟೋಬರ್ 2025 ರವರೆಗೆ ಹಾಸನ ವಲಯದ ಪೊಲೀಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 12-9-25 ರಂದು ನಾನು ಕಛೇರಿಯಲ್ಲಿದ್ದಾಗ ಚಾಸಾ-18ರವರು ಕರೆ ಮಾಡಿ, ಚಾಸಾ-1 ರವರು ಒಂದು ಗಾಂಜಾ ಕೇಸಿನ ಬಗ್ಗೆ ಮಾಹಿತಿ ಇದ್ದ ಬಗ್ಗೆ ಠಾಣೆಗೆ ದೂರನ್ನು ನೀಡಿರುತ್ತಾರೆ ಅದರಂತೆ ಪ್ರಕರಣ ದಾಖಲಿಸಿರುತ್ತೇನೆ, ಆದ್ದರಿಂದ ಪತ್ರಾಂಕಿತ ಅಧಿಕಾರಿಯಾಗಿ ಬಂದು ಸಹಕರಿಸುವಂತೆ ಕೇಳಿಕೊಂಡರು. ನಾನು ಸುಮಾರು ಬೆಳಿಗ್ಗೆ 10-45 ಗಂಟೆಗೆ ಶಾಂತಿಗ್ರಾಮ ಪೊಲೀಸ್ ಠಾಣೆಗೆ ಹೋದೆನು. ಸದರಿಯವರು ಶೋಧನೆ ನಡೆಸಲು ಸರ್ಚ್ ವಾರೆಂಟನ್ನು ಕೇಳಿದರು. ನಾನು ಮೇಲಧಿಕಾರಿಯಾದ್ದರಿಂದ ಅವರಿಗೆ ಸರ್ಚ್ ವಾರೆಂಟನ್ನು ನೀಡಿದೆನು.

3.ಚಾಸಾ-18ರವರು ತಮ್ಮ ಸಿಬ್ಬಂದಿಗಳು ಮತ್ತು ಪಂಚರೊಂದಿಗೆ ರಂಗನಾಥಪುರ ರೈಲ್ವೆ ನಿಲ್ದಾಣದ ಹತ್ತಿರ ತೆರಳಿದರು. ನಂತರ ಅಲ್ಲಿ ಆರೋಪಿತರನ್ನು ವಶಕ್ಕೆ ಪಡೆದು ನನಗೆ ಕರೆ ಮಾಡಿ ಪತ್ರಾಂಕಿತ ಅಧಿಕಾರಿಯಾಗಿ ಬರುವಂತೆ ತಿಳಿಸಿದರು, ಆಗ ನಾನು ಸ್ಥಳಕ್ಕೆ ಹೋದೆನು. ನಾನು ಹೋದಾಗ ಅಲ್ಲಿ 3 ವ್ಯಕ್ತಿಗಳಿದ್ದು ಅವರಲ್ಲಿ ಒಬ್ಬರು ಮಹಿಳೆ ಕೂಡ ಇದ್ದರು. ನಾನು ಸಿಬ್ಬಂದಿಗಳ ಮತ್ತು ಪಂಚರ ಅಂಗಶೋಧನೆ ಮಾಡಿಸಿದೆನು. ಆ ಮೂರೂ ಜನರ ಹೆಸರು ವಿಳಾಸ ಕೇಳಿದಾಗ ಒಬ್ಬರು ತಮ್ಮ ಹೆಸರು ಸೈಯದ್ ಫೈಸಲ್, ಇನ್ನೋರ್ವ ಸಿಕಂದರ್ ಪಾಷ ಮತ್ತು ಹೀನಾ ಕೌಸರ್ ಎಂದು ತಿಳಿಸಿದರು. ನಂತರ ನಾನುಆ ಮೂರೂ ಜನರಲ್ಲಿ ಅವರನ್ನು ನ್ಯಾಯಾಧೀಶರು ಅಂಗಶೋಧನೆ ಮಾಡಬೇಕೇ ಅಥವಾ ನಾನು ಅಂಗಶೋಧನೆ ಮಾಡಬಹುದಾ ಎಂದು ಕೇಳಿದಾಗ ಅವರು ಒಪ್ಪಿಕೊಂಡು ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿದರು. ಆ ದಾಖಲೆಯನ್ನು ಈಗ ನೋಡುತ್ತಿದ್ದು ನಿಪಿ-9 ರಿಂದ 11 ಎಂದು ಗುರುತಿಸಲಾಯಿತು. 2 ಮತ್ತು 3 ನೇ ಆರೋಪಿತರ ಅಂಗಶೋಧನೆಯನ್ನು ನಾನು ಮಾಡಿದೆನು. 1ನೇ ಆರೋಪಿಯ ಅಂಗಶೋಧನೆಯನ್ನು ನನ್ನ ಸಮಕ್ಷಮ ದುದ್ದ ಪಿ ಎಸ್ ನ ಮಹಿಳಾ ಪಿ ಎಸ್ ಐ ಚಾಸಾ-6ರವರ ಮೂಲಕ ಮಾಡಿಸಿದೆನು. ಅವರ ಅಂಗಶೋಧನೆ ಮಾಡಿದಾಗ ದೇಹದಲ್ಲಿ ಯಾವುದೇ ಮಾದಕ ವಸ್ತುಗಳು ದೊರೆತಿರಲಿಲ್ಲ. ಅದೇ ಸಮಯದಲ್ಲಿ ಚಾಸಾ-1 ಮತ್ತು 15 ರವರು ಆ ಮೂರೂ ಜನರ ಬಳಿ ಇದ್ದ ಬ್ಯಾಗುಗಳನ್ನು ಪರಿಶೀಲಿಸಿದರು. ಆರೋಪಿತರ ಬಳಿ ಇದ್ದ ಬ್ಯಾಗಿನಲ್ಲಿ skybag sports ಎಂಬ ಬರಹ ಇತ್ತು. ಅದರ ಒಳಗಡೆ ಪಂಚೆಯಲ್ಲಿ ಸುತ್ತಿದ ಟೇಪ್ ಹಾಕಿದ ಒಂದು ಬಂಡಲ್ ಇತ್ತು. ಆ ಟೇಪನ್ನು ಕಟ್ ಮಾಡಿ ಬಂಡಲ್ ತೆರೆದು ನೋಡಿದಾಗ ಅದರಲ್ಲಿ ಗಾಂಜಾ ಸೊಪ್ಪು ಇತ್ತು. ಅದನ್ನು ತೂಕ ಮಾಡಿದಾಗ 10ಕೆಜಿ 600 ಗ್ರಾಂ ಇತ್ತು. ಅದನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಮತ್ತೆ ತೂಕ ಮಾಡಿದಾಗ 10 ಕೆಜಿ 740 ಗ್ರಾಂ ಇತ್ತು.

4.3ನೇ ಆರೋಪಿತರ ಬಳಿ ಇದ್ದ ಬ್ಯಾಗಿನಲ್ಲಿ skybag sports ಎಂಬ ಬರಹ ಇತ್ತು. ಅದರ ಒಳಗಡೆ ಪಂಚೆಯಲ್ಲಿ ಸುತ್ತಿದ ಟೇಪ್ ಹಾಕಿದ ಒಂದು ಬಂಡಲ್ ಇತ್ತು. ಆ ಟೇಪನ್ನು ಕಟ್ ಮಾಡಿ ಬಂಡಲ್ ತೆರೆದು ನೋಡಿದಾಗ ಅದರಲ್ಲಿ ಗಾಂಜಾ ಸೊಪ್ಪು ಇತ್ತು. ಅದನ್ನು ತೂಕ ಮಾಡಿದಾಗ 10ಕೆಜಿ 220 ಗ್ರಾಂ ಇತ್ತು. ಅದನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಮತ್ತೆ ತೂಕ ಮಾಡಿದಾಗ 10 ಕೆಜಿ

340 ಗ್ರಾಂ ಇತ್ತು.

5.1ನೇ ಆರೋಪಿತರ ಬಳಿ ಇದ್ದ ಬ್ಯಾಗಿನಲ್ಲಿ newgoodwin ಎಂಬ ಬರಹ ಇತ್ತು. ಅದರ ಒಳಗಡೆ ಪಂಚೆಯಲ್ಲಿ ಸುತ್ತಿದ ಟೇಪ್ ಹಾಕಿದ ಒಂದು ಬಂಡಲ್ ಇತ್ತು. ಆ ಟೇಪನ್ನು ಕಟ್ ಮಾಡಿ ಬಂಡಲ್ ತೆರೆದು ನೋಡಿದಾಗ ಅದರಲ್ಲಿ ಗಾಂಜಾ ಸೊಪ್ಪು ಇತ್ತು. ಅದನ್ನು ತೂಕ ಮಾಡಿದಾಗ 10ಕೆಜಿ 300 ಗ್ರಾಂ ಇತ್ತು. ಅದನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಮತ್ತೆ ತೂಕ ಮಾಡಿದಾಗ 10 ಕೆಜಿ 410 ಗ್ರಾಂ ಇತ್ತು.

6.ಅವೆಲ್ಲವನ್ನು ಒಟ್ಟಾಗಿ ತೂಕ ಮಾಡಿದಾಗ ಒಟ್ಟು 31ಕೆಜಿ 500ಗ್ರಾಂ ಇತ್ತು. ಇದರ ಅಂದಾಜು ಮೌಲ್ಯ 12,40,000ಆಗಿತ್ತು. ಅದನ್ನು ಹೊಂದಲು ಪರವಾನಿಗೆ ಇದೆಯಾ ಎಂದು ಕೇಳಿದಾಗ ಮೂವರೂ ಇಲ್ಲ ಎಂದು ಹೇಳಿದರು. ಈ ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡು ಚಾಸಾ-18ರವರು ನಿಪಿ-2 ರಂತೆ ಸ್ಥಳದಲ್ಲಿ ಪಂಚನಾಮೆ ನಡೆಸಿದರು. ಅದಕ್ಕೆ ನಾನು ನಿಪಿ-2(ಬಿ) ರಂತೆ ಸಹಿ ಹಾಕಿರುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ಆ ದಿವಸ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 9ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇದ್ದಾರೆ.

**<u>ಪಾಟೀಸವಾಲುಃ 2 ಮತ್ತು 3ನೇ ಆರೋಪಿತರ ಪರ ಶ್ರೀ ಕೆ ಜೆ ಟಿ ವಕೀಲರಿಂದಃ</u>**

ಚಾಸಾ-18ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿದಾಗ ಸುಮಾರು 10-15 ಗಂಟೆ ಆಗಿರಬಹುದು. ಅವರಿಗೆ ಮಾಹಿತಿ ಬಂದ ವಿಚಾರವನ್ನು ನನಗೆ ತಿಳಿಸಿರುತ್ತಾರೆ. 13ನೇ ತಾರೀಖಿನಂದು ಕಳುಹಿಸಿರುತ್ತಾರೆ. ಎಷ್ಟು ಗಂಟೆಗೆ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ ಕಾರಣ ಅದನ್ನು ಕಛೇರಿಗೆ ಕಳುಹಿಸುತ್ತಾರೆ, ಕಛೇರಿ ಸಿಬ್ಬಂದಿಗಳು ಸ್ವೀಕರಿಸಿ ನನಗೆ ನೀಡಿರುತ್ತಾರೆ. ಅದಕ್ಕೆ ನಾನು ಯಾವುದೇ correspondance ಮಾಡಿಲ್ಲ. ನನಗೆ ಕರೆ ಬಂದ ತಕ್ಷಣ ನಾನು ಪೊಲೀಸ್ ಠಾಣೆಗೆ ಹೋದೆನು, ಅಲ್ಲಿ ಅವರಿಗೆ ವಾರೆಂಟನ್ನು ನೀಡಿದೆನು. ಅದನ್ನು ಚಾಸಾ-18ರವರು ಸ್ವೀಕರಿಸಿರುತ್ತಾರೆ.

2.ನಾನು ಸ್ಥಳಕ್ಕೆ ಹೋದ ನಂತರ ಆರೊಪಿತರಿಗೆ ನಾನು ಪೊಲೀಸ್ ಇಲಾಖೆಗೆ ಸೇರಿದವನು, ನಾನಲ್ಲದೆ ಬೇರೆ ಪತ್ರಾಂಕಿತ ಅಧಿಕಾರಿಗಳು ಶೋಧನೆ ಮಾಡಬೇಕೆ ಅಥವಾ ನ್ಯಾಯಾಧೀಶರು ಮಾಡಬೇಕೇ ಎಂದು ಕೇಳಿರುತ್ತೇನೆ. ನಾನು 2 ಮತ್ತು 3 ನೇ ಆರೋಪಿತರ ಅಂಗಶೋಧನೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-18ರವರು ನನಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಚಾಸಾ-18ರವರು ನಡೆಸಿದ ತನಿಖೆಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3.ಖಾಕಿ ಬಣ್ಣದ ಟೇಪು ಈ ದಿವಸ ನ್ಯಾಯಾಲಯದ ಮುಂದೆ ಇರುವುದಿಲ್ಲ. ಈ ಪ್ರಕರಣಕ್ಕೂ 2 ಮತ್ತು 3 ನೇ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4.ಆರೋಪಿತರು ಮುಸ್ಲಿಂ ಜನಾಂಗಕ್ಕೆ ಸೇರಿದವರು ಎಂದರೆ ಸಾಕ್ಷಿಯು ನಾನು ಕೇಳಿರುವುದು ಹೆಸರಷ್ಟೆ ಜನಾಂಗ ಕೇಳಿಲ್ಲ ಎನ್ನುತ್ತಾರೆ. ಅವರಿಗೆ ಕನ್ನಡ ಓದಲು ಬರೆಯಲು ಬರುತ್ತದಾ ಎಂದು ಕೇಳಿ ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿಯು ಅವರು ಕನ್ನಡ ಮಾತನಾಡುತ್ತಿದ್ದರು, ಓದಲು ಬರುತ್ತದಾ ಎಂದು ಕೇಳಿಲ್ಲ ಎನ್ನುತ್ತಾರೆ. ಅದರಲ್ಲಿರುವ ಬರವಣಿಗೆಯನ್ನು ಓದಿ ಹೇಳಿರುತ್ತಾರೆ. ನಿಪಿ-9 ರಿಂದ 11 ರಲ್ಲಿ ಓದಿ ಹೇಳಿದೆ ಎಂದು ಬರೆದಿದೆಯಾ ಎಂದರೆ ಗೊತ್ತಿಲ್ಲ. ನಿಪಿ-9 ರಿಂದ 11 ರಂತೆ ಆರೋಪಿತರು ಅಂಗಶೋಧನೆಗೆ ಒಪ್ಪಿಗೆ ಕೊಟ್ಟಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅವರ ಸಹಿಯನ್ನು ಬಿಳಿ ಹಾಳೆಗೆ ಪಡೆದುಕೊಂಡು ನಂತರ ಟೈಪ್ ಮಾಡಿಸಿದ್ದು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರಿಂದ ನಾವು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1ನೇ ಆರೋಪಿತರ ಪರ ಶ್ರೀ ಕೆ ಸಿ ಕೆ ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಕಾರಣ ಕಂಡುಬಾರದ ಕಾರಣ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಗಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**